ದಿನಾಂಕಃ 12-09-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ವೈ ಎಂ ಅರ್ ವಕೀಲರಿಂದಃ

ನನಗೆ ಕನ್ನಡ ಮತ್ತು ಇಂಗ್ಲೀಷ್ ಓದಲು ಬರೆಯಲು ಬರುವುದಿಲ್ಲ ಎಂದರೆ ಸರಿ. ನಾನು ಸಲ್ಲಿಸಿರುವ ಮುಖ್ಯ ವಿಚಾರಣಾ ಪ್ರ.ಪತ್ರದಲ್ಲಿ ಬರೆದಿರುವ ಸಂಗತಿಗಳು ನನಗೆ ಗೊತ್ತಿಲ್ಲ. ಸದರಿ ದಾವೆಯ ದಾವಾಸ್ತಿಯ ಸರ್ವೆ ನಂ, ಚೆಕ್ಕುಬಂದಿ ಮತ್ತು ವಿಸ್ತೀರ್ಣ ನನಗೆ ಗೊತ್ತಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ದಾವಾಸ್ತಿಯ ಸರ್ವೆ ನಂ 11 ರಲ್ಲಿ 1 ಎಕರೆ 7 ಗುಂಟೆ ಜಮೀನು ಸೂಳೆಕೆರೆ ಗಡಿಯಲ್ಲಿ ಇದೆ. ಸದರಿ ಆಸ್ತಿಯನ್ನು 22 ವರ್ಷಗಳ ಹಿಂದೆ ನಮ್ಮ ಚಿಕ್ಕಪ್ಪನಿಂದ ನಾನು ಖರೀದಿ ಮಾಡಿರುತ್ತೇನೆ. ಸದರಿ ಕ್ರಯ ಪತ್ರ ನನ್ನ ಬಳಿ ಇದೆ. ಈ ದಾವೆ ಹೂಡುವ ಸಮಯಕ್ಕೆ ಸದರಿ ದಾವಾಸ್ತಿ ಯಾರ ಹೆಸರಿನಲ್ಲಿದೆ ಎಂದು ನನಗೆ ಗೊತ್ತಿಲ್ಲ.

1 ನೇ ಪ್ರತಿವಾದಿ ನನ್ನ ಮಗ. 2 ಮತ್ತು 3 ನೇ ಪ್ರತಿವಾದಿಗಳು ಯಾರು ಎಂದು ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿ ದುಬೈನಲ್ಲಿ ವಾಸವಾಗಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಈ ದಾವೆ ಹೂಡುವ ಸಮಯಕ್ಕೆ 2 ನೇ ಪ್ರತಿವಾದಿ ಭಾರತದಲ್ಲಿ ವಾಸವಿರಲಿಲ್ಲ ಎಂದರೆ ಸಾಕ್ಷಿ ನಾನು ಅವರನ್ನು ನೋಡಿಲ್ಲ ಎಂದು ನುಡಿಯುತ್ತಾರೆ. ನಾನು ಈ ದಾವೆಯನ್ನು ನನ್ನ ಚಿಕ್ಕಪ್ಪನಾದ ದಸ್ತಗೀರ್ ಸಾಬ್‌ನ ತಾಕೀತಿನ ಮೇರೆಗೆ ಹೂಡಿರುತ್ತೇನೆ. ಈ ದಾವೆಗೆ ಮಾಹಿತಿಯನ್ನು ನನ್ನ ಚಿಕ್ಕಪ್ಪನ ಮಗ ಕೊಟ್ಟಿರುತ್ತಾನೆ. ಹಾಗಾಗಿ ನನಗೆ ಈ ದಾವೆಯ ಬಗ್ಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ದಾವಾಸ್ತಿ ಈ ದಾವೆ ಹೂಡುವ ಸಮಯಕ್ಕೆ 1 ನೇ ಪ್ರತಿವಾದಿಯ ಹೆಸರಿನಲ್ಲಿತ್ತು ಎಂದರೆ ಸರಿ.

1 ನೇ ಪ್ರತಿವಾದಿ ದಾವಾ ಬಿ ಷೆಡ್ಯೂಲ್ ಆಸ್ತಿಯನ್ನು 1992 ರಲ್ಲಿ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ಆಸ್ತಿಯನ್ನು ನಾನು ಖರೀದಿಸಿ ನನ್ನ ಗಂಡನಾದ ಶಂಶುದ್ದೀನ್ ರವರ ಹೆಸರಿಗೆ ಮಾಡಿದ್ದೆ ಎಂದು ನುಡಿಯುತ್ತಾರೆ. ನನ್ನ ಗಂಡ ಸುಮಾರು 30 ವರ್ಷಗಳ ಹಿಂದೆ ಮೃತಪಟ್ಟಿರುತ್ತಾರೆ. ನನ್ನ ಗಂಡ ಮೃತಪಟ್ಟ ತರುವಾಯ ಸದರಿ ಬಿ ಷೆಡ್ಯೂಲ್ ಆಸ್ತಿಯಲ್ಲಿ 1 ನೇ ಪ್ರತಿವಾದಿ ಸಾಗು ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ನನ್ನ ಗಂಡನಿಗೆ ಆದಾಯ ಬರುವಂತಹ ಯಾವುದೇ ಆಸ್ತಿ ಇಲ್ಲ ಎಂದರೆ ಸರಿ. ನನ್ನ ಗಂಡ 20-07-1998 ರಲ್ಲಿ ಮೃತಪಟ್ಟಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಹುಬ್ಬಳ್ಳಿಯ ಆಸ್ಪತ್ರೆಯಲ್ಲಿ 2-3 ತಿಂಗಳುಗಳ ಕಾಲ ಚಿಕಿತ್ಸೆ ಪಡೆದರೂ ಸಹ ಫಲಕಾರಿಯಾಗದೆ ಮೃತಪಟ್ಟರು ಎಂದು ನುಡಿಯುತ್ತಾರೆ.

ಸೂಳೆಕೆರೆ ಗ್ರಾಮದಲ್ಲಿ ಸರ್ವೆ ನಂ 259 ರಲ್ಲಿ 20 ಗುಂಟೆ ನೀರಾವರಿ ಜಮೀನು ನನ್ನ ಗಂಡನ ಹೆಸರಿಗೆ ಇತ್ತು ಎಂದರೆ ಸಾಕ್ಷಿ ಸದರಿ ಜಮೀನು ನನ್ನ ಅಜ್ಜನಿಂದ ನನ್ನ ತಾಯಿಯಾದ ಬುಡೇನ್ ಖಾತುನ್ ಬೀ ರವರಿಗೆ ಬಂದಂತಹ ಆಸ್ತಿಯಾಗಿರುತ್ತದೆ ಎಂದು ನುಡಿಯತ್ತಾರೆ. ಸದರಿ ಆಸ್ತಿಯನ್ನು ತಲಾ 10 ಗುಂಟೆಯಂತೆ 2 ಮತ್ತು 3 ನೇ ವಾದಿಗಳಿಗೆ 1 ನೇ ಪ್ರತಿವಾದಿ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ತಲಾ 10 ಗುಂಟೆಯ ಜಮೀನು ಪ್ರಸ್ತುತ 2 ಮತ್ತು 3 ನೇ ವಾದಿಗಳ ಅನುಭವದಲ್ಲಿ ಇದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ಆಸ್ತಿ ನಮ್ಮ ತಾಯಿಯದು ಎಂದು ನುಡಿಯುತ್ತಾರೆ. ಸದರಿ ಆಸ್ತಿಯನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸದರಿ ಸಮಯಕ್ಕೆ 2003-04 ನೇ ಸಾಲಿನಲ್ಲಿ ದಾವಾ ಬಿ ಷೆಡ್ಯೂಲ್ ಆಸ್ತಿಯನ್ನು 1 ನೇ ಪ್ರತಿವಾದಿಗೆ ನಾನು ಮತ್ತು ನನ್ನ ತಾಯಿ ಮತ್ತು ಇತರೆ ಕುಟುಂಬ ಸದಸ್ಯರು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

(ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು).

**(**ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು**)**

ಓ**.**ಹೇ**.**ಕೇ**.** ಸರಿ ಇದೆ**.**

02 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ. ಚನ್ನಗಿರಿ.